ಅಸಲು ದಾವ ಸಂಖ್ಯೆಃ **573/2026**

ಪಿ.ಡಬ್ಲೂ **-1**

ದಿಃ **28-08-2026** ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ವಕೀಲರಾದ ಮಾನ್ಯ ಡಿಜಿಪಿ ರವರಿಂದಃ-

1. ಸಂತೋಷ ಶಾಮರಾವ ಕುಲಕರ್ಣಿ ಎಂದರೆ ನನ್ನ ಅಣ್ಣ. ನನಗೆ ಒಬ್ಬನೇ ಅಣ್ಣ ಇರುತ್ತಾನೆ. ನನಗೆ ಬೇರೆ ಸಹೋದರ ಸಹೋದರಿಯರು ಇರುವುದಿಲ್ಲ. ಶಾಮರಾವ ಎಂದರೆ ನನ್ನ ತಂದೆ ಬದುಕಿರುವುದಿಲ್ಲ. ಅವರು 2002 ರಲ್ಲಿ ಮರಣಹೊಂದಿರುತ್ತಾರೆ. ನನ್ನ ತಾಯಿ ಸ್ನೇಹಲ್ ರವರೂ ಸಹ ಮರಣಹೊಂದಿರುತ್ತಾರೆ. ಸಂತೋಷ ರವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ. ನಾನು ಸತೀಶ ಸೊಹಾನಿ ರವರನ್ನು 1989 ರಲ್ಲಿ ಮದುವೆಯಾಗಿರುತ್ತೇನೆ. ಸಂತೋಷ ರವರ ಮದುವೆಯಾಗಿರಲಿಲ್ಲ. ಸಂತೋಷ ರವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ ಆದ್ದರಿಂದ ಅವರಿಗೆ ಮದುವೆಯಾಗಿರಲಿಲ್ಲ.

2. ನಾನು ಮಹಾರಾಷ್ಟ್ರದಲ್ಲಿ ನನ್ನ ಗಂಡನ ಮನೆಯಲ್ಲಿ ಇರುತ್ತೇನೆ ಎಂದರೆ ಸರಿ. ಸಂತೋಷ ರವರು ಬೆಳಗಾವಿಯಲ್ಲಿ ಇರುತ್ತಿದ್ದರು ಎಂದರೆ ಸರಿ. ನಾನು ಸಂತೋಷ ರವರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿ ಇದ್ದೆ. ಸಂತೋಷ ರವರು ಬೆಳಗಾವಿಯಲ್ಲಿ ಇರುವಾಗ ಅವರು ಎಲ್ಲಿ ಇರುತ್ತಿದ್ದರು ಹಾಗೂ ಎಲ್ಲಿ ಊಟ ಮಾಡುತ್ತಿದ್ದರು ಎಂಬುದರ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತನ್ನ ತಾಯಿ ಕಳೆದ ವರ್ಷವೇ ತೀರಿಕೊಂಡಿದ್ದು, ಸಂತೋಷ ರವರು ಅವರೊಂದಿಗೆ ಇರುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಸಂತೋಷ ರವರಿಗೆ ಸಂಬಂಧಿಕಳಾಗದ ಕಾರಣ ನಾನು ವಾರಸಾ ಪ್ರಮಾಣ ಪತ್ರಕ್ಕೆ ಸಲ್ಲಿಸಿದ ಅರ್ಜಿಯನ್ನು 3ನೇ ಪ್ರತಿವಾದಿ ತಿರಸ್ಕರಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸಂತೋಷ ರವರಿಗೆ

ವಾರಸುದಾರಳು ಅಲ್ಲದೇ ಇದ್ದರೂ ಸಹ ಕೇವಲ ಅವರ ಹೆಸರಿನಲ್ಲಿ ಇರುವ ಚರಾಸ್ತಿ ಹಾಗೂ ಸ್ಥಿರಾಸ್ತಿ ಪಡೆಯುವ ಉದ್ದೇಶದಿಂದ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಗೆ ಅನುಕೂಲವಾಗಲಿ ಎಂದು ದಾಖಲೆಗಳನ್ನು ಸೃಷ್ಟಿಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**